**ದಿನಾಂಕಃ 05.12.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**
**ಪಾಟೀ ಸವಾಲು: 2 ನೇ ಎದುರುದಾರರ ಪರ ವಕೀಲರಾದ ಶ್ರೀ.VSN ರವರಿಂದಃ**

1) ನನ್ನ ಗಂಡನಿಗೆ ನಾನು ಸೇರಿದಂತೆ ಒಟ್ಟು ಇಬ್ಬರು ಹೆಂಡತಿಯರು. ನನಗೆ 3 ಜನ ಮಕ್ಕಳು ಇದ್ದಾರೆ. ನನ್ನ ಗಂಡನ ಎರಡನೇ ಹೆಂಡತಿಗೆ ಯಾವುದೇ ಸಂತಾನ ಇರುವುದಿಲ್ಲ.

2) ನನ್ನ ಗಂಡನ 2 ನೇ ಹೆಂಡತಿ ಮತ್ತು ನನ್ನ ಗಂಡನು ಒಂದೇ ಮನೆಯಲ್ಲಿ ವಾಸ ಇದ್ದರು ಮತ್ತು ನಾನು ಮತ್ತು ನನ್ನ ಮಕ್ಕಳು ಬೇರೆ ಮನೆಯಲ್ಲಿ ವಾಸ ಇದ್ದೆವು ಎಂದರೆ ಸರಿ.

3) ನನ್ನ ಗಂಡನ 2 ನೇ ಹೆಂಡತಿ ಹೆಸರು ರಾಣಿ ಆಗಿದೆ. ನನ್ನ ಗಂಡನು ನನಗಿಂತ ವಯಸ್ಸಿ ನಲ್ಲಿ ಸುಮಾರು 10 ವರ್ಷ ದೊಡ್ಡವರು ಆಗಿದ್ದರು. ನನ್ನ ಬಳಿ ಪಡಿತರ ಚೀಟಿಯು ಇರುವುದಿಲ್ಲ. ನನ್ನ ಮಕ್ಕಳು ನನ್ನ ಜೊತೆಯಲ್ಲಿಯೇ ಇದ್ದಾರೆ. ನಾನು ಕೂಲಿ ಕೆಲಸ ಮಾಡುತ್ತೇನೆ ಎಂದರೆ ಸುಳ್ಳು. ಅಪಘಾತದ ಸಂಬಂಧವಾಗಿ ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿದ್ದಾರೆ. ನನ್ನ ಹೇಳಿಕೆಯ ಪ್ರತಿಯನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ.

4) ನನ್ನ ಗಂಡನ 2 ನೇ ಹೆಂಡತಿಗೆ ಪ್ರತ್ಯೇಕವಾದ ಪಡಿತರ ಚೀಟಿ ಇದೆ ಎಂದರೆ ಸುಳ್ಳು.

5) ಹೊಸಕೋಟೆಯಲ್ಲಿ ಇರುವಂತಹ ಇರುಳಿಗರ ಕಾಲೋನಿಯಲ್ಲಿ ನಾನು ಒಂದು ಗುಡಸಲಿನಲ್ಲಿ ವಾಸ ಇದ್ದೇನೆ, ಸದರಿ ಗುಡಿಸಲಿಗೆ ಯಾವುದೇ ಡೋರ್ ನಂಬರ್ ಇರುವುದಿಲ್ಲ.

6) ಉಮೇಶ ಮತ್ತು ಮರಿಗೌಡ ಎಂಬ ವ್ಯಕ್ತಿಗಳು ನನಗೆ ಗೊತ್ತಿರುವುದಿಲ್ಲ. ಉಮೇಶ ರವರು ನನ್ನ ಗಂಡನ ಅಣ್ಣ ಆಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮುತ್ತುರಾಜು ರವರು ನನ್ನ ಗಂಡನ ಸೋದರ ಮಾವ ಆಗಿದ್ದಾರೆ.

7) ನನ್ನ ಗಂಡನು ರಾಣಿ ರವರನ್ನು ಮದುವೆ ಆದ ನಂತರ ನಾನು ನನ್ನ ಗಂಡನ ಜೊತೆಯಲ್ಲಿ ವಾಸ ಇರಲಿಲ್ಲ ಮತ್ತು ಪ್ರತ್ಯೇಕವಾಗಿ ವಾಸ ಇದ್ದೆನು ಎಂದರೆ ಸುಳ್ಳು. ನನ್ನ ಎರಡು ಜನ ಹೆಣ್ಣು ಮಕ್ಕಳು ರಾಣಿ ರವರ ಜೊತೆ ವಾಸ ಇದ್ದರು ಮತ್ತು ಇವತ್ತಿಗೂ ಇದ್ದಾರೆ ಮತ್ತು ನಾನು ನನ್ನ ಮಗನ ಜೊತೆಯಲ್ಲಿ ಒಂದು ಮನೆಯಲ್ಲಿ ವಾಸ ಇದ್ದೇವೆ ಎಂದರೆ ಸುಳ್ಳು.

8) ನನ್ನ ಹೆಸರಿನಲ್ಲಿ ಚುನಾವಣಾ ಗುರುತಿನ ಚೀಟಿ ಮತ್ತು ಆಧಾರ್ ಕಾರ್ಡ್ ಮತ್ತು ಪಡಿತರ ಚೀಟಿ ಎಲ್ಲವೂ ಇವೆ ಎಂದರೆ ಸುಳ್ಳು. ಸತ್ಯ ಸಂಗತಿಯು ನ್ಯಾಯಾಲಯಕ್ಕೆ ತಿಳಿದು ಬಿಡುತ್ತದೆ ಎಂಬ ಭಯದಿಂದ ನಾನು ನನ್ನ ಪಡಿತರ ಚೀಟಿಯನ್ನು ಈ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ ಎಂದರೆ ಸುಳ್ಳು.

9) ಅಪಘಾತದ ನಂತರ ನನ್ನ ಗಂಡನನ್ನು ದಯಾನಂದ ಆಸ್ಪತ್ರೆಗೆ ತೆಗೆದುಕೊಂಡು ಹೋಗಲಾಗಿತ್ತು. ನಾನು ಕೂಲಿ ಕೆಲಸ ಮಾಡಿಕೊಂಡು ಪ್ರತ್ಯೇಕವಾಗಿ ವಾಸ ಇದ್ದೆನು ಮತ್ತು ನನ್ನ ಗಂಡನಿಂದ ಯಾವುದೇ ಹಣವನ್ನು ನಾನು ಪಡೆದುಕೊಳ್ಳುತ್ತಾ ಇರಲಿಲ್ಲ ಮತ್ತು ನನ್ನ ಗಂಡನ ಆದಾಯದ ಮೇಲೆ ನಾನು ಅವಲಂಬಿತಳು ಆಗಿರಲಿಲ್ಲ ಎಂದರೆ ಸುಳ್ಳು.

10) ನನ್ನ ಗಂಡನ ಅಂತ್ಯಕ್ರಿಯೆ ಮತ್ತು ವೈಕುಂಠ ಸಮಾರಾಧನೆ ಎಲ್ಲವನ್ನೂ ಶ್ರೀಮತಿ ರಾಣಿ ಅವರೇ ಮಾಡಿದ್ದಾರೆ ಮತ್ತು ಶವ ಸಂಸ್ಕಾರಕ್ಕೆ ಸಹಾ ನಾನು ಹೋಗಿರುವುದಿಲ್ಲ ಎಂದರೆ ಸುಳ್ಳು.

11) ದಯಾನಂದ ಆಸ್ಪತ್ರೆಯಲ್ಲಿಯೇ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ಅಪಘಾತದ ಸಂಬಂಧವಾಗಿ ಶ್ರೀಮತಿ ರಾಣಿ ರವರೇ ಪೊಲೀಸರಿಗೆ ದೂರು ಕೊಟ್ಟಿದ್ದಾರೆ ಎಂದರೆ ಸರಿ. ನನ್ನ ಗಂಡನು ರಾಣಿ ಅವರನ್ನು ಮದುವೆ ಆದ ನಂತರ ನಾನು ನಮ್ಮ ತಾಯಿಯ ಮನೆಗೆ ಹೋಗಿ ವಾಸ ಮಾಡಲು ಪ್ರಾರಂಭ ಮಾಡಿದೆನು ಮತ್ತು ನನ್ನ ಎರಡು ಜನ ಹೆಣ್ಣು ಮಕ್ಕಳು ಮತ್ತು ನನ್ನ ಗಂಡನ ತಾಯಿಯು ರಾಣಿಯ ಜೊತೆಯಲ್ಲಿಯೇ ವಾಸ ಇದ್ದಾರೆ ಮತ್ತು ಅವರೆಲ್ಲರೂ ತಟ್ಟೆಕೆರೆ ಗ್ರಾಮದಲ್ಲಿಯೇ ವಾಸ ಇದ್ದಾರೆ ಮತ್ತು ಕೂಲಿ ಕೆಲಸ ಮಾಡುತ್ತಾ ಇದ್ದಾರೆ ಎಂಬುದಾಗಿ ಪೊಲೀಸರ ಮುಂದೆ ರಾಣಿ ಅವರು ಹೇಳಿಕೆ ನೀಡಿದ್ದಾರೆ ಎಂದರೆ ಸುಳ್ಳು.

12) ನನ್ನ ಗಂಡನ ತಂದೆಯು ಜೀವಂತ ಇದ್ದಾರೆ. ನನ್ನ ಅತ್ತೆ ಮತ್ತು ಮಾವನ ಪಡಿತರ ಚೀಟಿಯನ್ನು ಹಾಜರುಪಡಿಸಲು ಸಾಧ್ಯ ಇದೆಯೋ ಹೇಗೆ ಎಂದರೆ ಅವರು ಆ ದಾಖಲೆಯನ್ನು ಮಾಡಿಸಿಕೊಂಡಿರುವುದಿಲ್ಲ. ರಾಣಿ ರವರನ್ನು ವಿಚಾರಣೆ ಮಾಡಲು ನನಗೆ ತೊಂದರೆ ಇರುವುದಿಲ್ಲ.

13) ಯಾವ ಅಪಘಾತದಲ್ಲಿ ನನ್ನ ಗಂಡನು ಮರಣ ಹೊಂದಿದ್ದಾರೋ ಸದರಿ ಅಪಘಾತವನ್ನು ನಾನು ನೋಡಿರುವುದಿಲ್ಲ. ಅಪಘಾತದ ಸಮಯದಲ್ಲಿ ನನ್ನ ಗಂಡನು ಹೆಲ್ಮೆಟ್ ಹಾಕಿಕೊಂಡಿರಲಿಲ್ಲ ಎಂದರೆ ಸುಳ್ಳು.

14) ಅಪಘಾತವು ಕನಕಪುರದಿಂದ ಬೆಂಗಳೂರಿಗೆ ಬರುವ ರಸ್ತೆಯಲ್ಲಿ ಆಗಿದೆ ಎಂದರೆ ಸರಿ. ಅಪಘಾತವು ಯಾವ ರೀತಿ ಆಯಿತು ಎಂಬ ವಿಷಯವನ್ನು ಓರ್ವ ನಾಗರಾಜು ಎಂಬುವವರು ದೂರವಾಣಿ ಮೂಲಕ ನಮ್ಮ ಅತ್ತೆಗೆ ಹೇಳಿದ್ದಾರೆ ಮತ್ತು ಆ ವಿಷಯವನ್ನು ನಮ್ಮ ಅತ್ತೆಯು ನನಗೆ ಹೇಳಿದ್ದಾರೆ. ನಾನು ಹಾಜರುಪಡಿಸಿರುವಂತಹ ದಾಖಲೆಗಳು ಕ್ರಮ ಬದ್ಧವಾಗಿ ಇವೆ.

15) ನಾನು ಹಾಜರುಪಡಿಸಿರುವಂತಹ ನಕ್ಷೆಯಲ್ಲಿ ಮತ್ತು ಮಹಜರ್ ನಲ್ಲಿ ಇರುವ

ಮಾಹಿತಿಯ ಪ್ರಕಾರವೇ ಅಪಘಾತದ ಸಮಯದಲ್ಲಿ ನನ್ನ ಗಂಡನು ತಮ್ಮ ದ್ವಿಚಕ್ರ ವಾಹನವನ್ನು ಅತೀ ವೇಗವಾಗಿ ಚಾಲನೆ ಮಾಡಿದ್ದಾರೆ ಮತ್ತು ಏಕಾಏಕಿ ತಮ್ಮ ದ್ವಿಚಕ್ರ ವಾಹನವನ್ನು ರಸ್ತೆಯ ಎಡಭಾಗದಿಂದ ರಸ್ತೆಯ ಬಲಭಾಗಕ್ಕೆ ಯಾವುದೇ ಸೂಚನೆಯನ್ನು ಕೊಡದೇ ಏಕಾಏಕಿ ಚಾಲನೆ ಮಾಡಿದ್ದಾರೆ ಮತ್ತು ಆ ಕಾರಣದಿಂದ ಅಪಘಾತವು ಆಗಿದೆ ಎಂದರೆ ಸುಳ್ಳು.

16) ನನ್ನ ಗಂಡನಿಗೆ ತಲೆಯ ಮೇಲೆ ಮಾತ್ರ ಗಾಯ ಆಗಿತ್ತು ಎಂದರೆ ಸರಿ.

17) ಅಪಘಾತದ ಸಮಯದಲ್ಲಿ ನನ್ನ ಗಂಡನು ಹೆಲ್ಮೆಟ್ ಹಾಕಿಕೊಂಡಿರಲಿಲ್ಲ ಮತ್ತು ಆ ಕಾರಣದಿಂದಲೇ ನನ್ನ ಗಂಡನು ಕೆಳಗೆ ಬಿದ್ದಾಗ ತಲೆಗೆ ಗಾಯಗಳು ಆಗಿವೆ ಮತ್ತು ನನ್ನ ಗಂಡನು ಸ್ಥಳದಲ್ಲಿಯೇ ಮರಣ ಹೊಂದಿದ್ದಾರೆ ಎಂದರೆ ಅವರು ಹೆಲ್ಮೆಟ್ ಹಾಕಿಕೊಂಡಿದ್ದರು. ಈ ವಿಷಯದ ಬಗ್ಗೆ ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

18) ಕಾರಿನ ಚಾಲಕನ ತಪ್ಪಿನಿಂದ ಅಪಘಾತವು ಸಂಭವಿಸಿರುವುದಿಲ್ಲ ಮತ್ತು ನನ್ನ ಗಂಡನ ತಪ್ಪಿನಿಂದಲೇ ಅಪಘಾತವು ಆಗಿದೆ ಮತ್ತು ಈಗ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

19) ನನ್ನ ಗಂಡನ ಶವ ಸಂಸ್ಕಾರ ಮತ್ತು ವೈಕುಂಠ ಸಮಾರಾಧನೆ ಮತ್ತು ನನ್ನ ಗಂಡನ ಮೃತ ದೇಹದ ಸಾಗಾಣಿಕೆಗೆ ಸೇರಿದಂತೆ ಒಟ್ಟು 3 ಲಕ್ಷ ರೂಪಾಯಿಗಳು ಖರ್ಚು ಆಗಿದೆ ಎಂಬುದಾಗಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

20) ನನ್ನ ಅನುಕೂಲಕ್ಕಾಗಿ ನಾನು ಆಧಾರ್ ಕಾರ್ಡ್ ಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು. ನನ್ನ ಗಂಡನು ಒಂದು ತಿಂಗಳಿಗೆ 40 ಸಾವಿರ

ರೂಪಾಯಿ ಸಂಪಾದನೆ ಮಾಡುತ್ತಾ ಇದ್ದರು ಎಂಬುದಾಗಿ ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಾ ಇದ್ದೇನೆ ಎಂದರೆ ಸುಳ್ಳು.

21) ನನ್ನ ಗಂಡನು ಮರಣ ಹೊಂದಿರುವ ಕಾರಣದಿಂದ ಆರ್ಥಿಕವಾಗಿ ನನಗೆ ಯಾವುದೇ ತೊಂದರೆ ಆಗಿರುವುದಿಲ್ಲ ಮತ್ತು ನನ್ನ ಜೀವನವನ್ನು ನಾನು ನೋಡಿಕೊಳ್ಳುತ್ತಾ ಇದ್ದೇನೆ ಎಂದರೆ ಸುಳ್ಳು.

22) ಸಾಯುವ ಸಮಯದಲ್ಲಿ ನನ್ನ ಗಂಡನಿಗೆ 45 ವರ್ಷಕ್ಕಿಂತ ಹೆಚ್ಚಿನ ವಯಸ್ಸು ಆಗಿತ್ತು ಎಂದರೆ ಸುಳ್ಳು.

**ಸೂಚನೆಃ** ಈಗ ಈ ಸಾಕ್ಷಿದರರು ಶ್ರೀಮತಿ ರಾಣಿ ರವರು ಸಹಾ ಈ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದು ನುಡಿದಿದ್ದಾರೆ. ನಂತರ ನ್ಯಾಯಾಲಯವೇ ಶ್ರೀಮತಿ ರಾಣಿ ರವರ ಹೆಸರನ್ನು ಕೂಗಿದ ನಂತರ ಸದರಿ ರಾಣಿ ರಮ ಹಾಜರಾಗಿದ್ದಾರೆ ಮತ್ತು "ತಾವು ಮತ್ತು ಈ ಸಾಕ್ಷಿದಾರರು ಎಲ್ಲರೂ ಹೊಸಕೋಟೆಯಲ್ಲಿಯೇ ವಾಸ ಇದ್ದೇವೆ" ಎಂದು ಹೇಳಿದ್ದಾರೆ. ಮುಂದುವರೆದು "ತಮ್ಮ ಬಳಿ ಪಡಿತರ ಚೀಟಿ ಇರುವುದಿಲ್ಲ" ಎಂದೂ ಸಹಾ ಶ್ರೀಮತಿ ರಾಣಿ ರವರು ತಿಳಿಸಿದ್ದಾರೆ.

**ಮರು ವಿಚಾರಣೆಃ ಇಲ್ಲ.**
(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.